

# ಸಮಾಜಕ್ಕೆ ಜ್ವರ ಬಂದಾಗ...

ಫೋಟೋ ಕಥೆ

ವಿಶಾಲವಾದ ಹಾಲ್‌ನಲ್ಲಿ ಮಲಗಿರುವ–ಕುಳಿತಿರುವ ಜನರನ್ನು ಹಾಗೂ ಅಸ್ತವ್ಯಸ್ತ ಸಾಮಗ್ರಿಗಳನ್ನು ನೋಡಿದರೆ ನಿರಾಶ್ರಿತ ಕೇಂದ್ರವೊಂದರ ನೆನಪಾಗುತ್ತದೆ. ಯಾತ್ರೆಗೋ ಜಾತ್ರೆಗೋ ಬಂದವರು ಯಾವುದೋ ದೇಗುಲದ ಅಂಗಳದಲ್ಲಿ ಬಿಡಾರ ಹೂಡಿದಂತೆಯೂ ಕಾಣಿಸುತ್ತದೆ. ಆದರೆ, ಇದು ಯಾವುದೋ ಗಂಜಿ ಕೇಂದ್ರದ (ಕಾಳಜಿ ಕೇಂದ್ರ) ಫೋಟೊ ಅಲ್ಲ. ಗಮನವಿಟ್ಟು ನೋಡಿ. ಚಿತ್ರದಲ್ಲಿ ಗ್ಲುಕೋಸ್ ದ್ರಾವಣದ ನಳಿಕೆಗಳನ್ನು ಕೈಗೆ ಅಂಟಿಸಿಕೊಂಡವರು ಹಾಗೂ ಅವರ ಸುತ್ತಮುತ್ತ ಔಷಧಿಗಳು ಕಾಣಿಸುತ್ತವೆ. ಇಡೀ ಅಂಗಳದಲ್ಲಿ ಒಂದು ಬಗೆಯ ದುಃಖ ಹಾಗೂ ಔಷಧಿಗಳ ವಾಸನೆ ಮಿಳಿತಗೊಂಡು ಮಡುಗಟ್ಟಿದಂತೆ ಕಾಣಿಸುತ್ತದೆ.

ನೆರೆಯ ಬಾಂಗ್ಲಾ ದೇಶದ ಢಾಕಾದಲ್ಲಿನ 'ಮುಗ್ದಾ ಮೆಡಿಕಲ್ ಕಾಲೇಜ್ ಅಂಡ್ ಹಾಸ್ಪಿಟಲ್'ನ ವಾರ್ಡ್ ಒಂದರ ಚಿತ್ರವಿದು. ಕರ್ನಾಟಕ ನೆರೆಯ ಸಂಕಟಕ್ಕೆ ಸಿಲುಕಿದ್ದರೆ, ಡೆಂಗಿ ಮಾರಿಯ ಉರಿನೋಟಕ್ಕೆ ಬಾಂಗ್ಲಾ ಸಿಲುಕಿದಂತಿದೆ. ಅಲ್ಲೀಗ ಡೆಂಗಿ ಸುಂಟರಗಾಳಿಯ ರೂಪ ತಾಳಿದೆ. ಅದರ ಪರಿಣಾಮವಾಗಿ ಆಸ್ಪತ್ರೆಗಳಲ್ಲಿ ಜ್ವರಪೀಡಿತರ ನೂಕುನುಗ್ಗಲು. ಪ್ಲೇಟ್‌ಲೆಟ್‌ಗಳನ್ನು ನೀಡಬಲ್ಲ ರಕ್ತದಾನಿಗಳಿಗೆ ಅಪಾರ ಬೇಡಿಕೆ. ಸಾಮಾಜಿಕ ಜಾಲತಾಣಗಳಲ್ಲಂತೂ ಡೆಂಗಿ ಸಮಾಚಾರ ಹಾಗೂ ರಕ್ತದಾನಿಗಳ ನೆರವಿನ ನಿರೀಕ್ಷೆಯ ಸುದ್ದಿಗಳೇ ಹೆಚ್ಚು.

ಈ ಮಟ್ಟಿಗಿನ ಡೆಂಗಿ ಬಾಧೆಯನ್ನು ಬಾಂಗ್ಲಾ ಹಿಂದೆಂದೂ ಅನುಭವಿಸಿರಲಿಲ್ಲ. ಕಳೆದ ಜನವರಿಯಿಂದೀಚೆಗೆ ಡೆಂಗಿ ಕಾರಣದಿಂದಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದವರ ಸಂಖ್ಯೆ 30 ಸಾವಿರಕ್ಕೂ ಹೆಚ್ಚು. ಇತ್ತೀಚೆಗಂತೂ ಪ್ರತಿ ದಿನ ಸುಮಾರು 2000 ಡೆಂಗಿ ಪೀಡಿತರು ಆಸ್ಪತ್ರೆಗೆ ದಾಖಲಾಗುತ್ತಿದ್ದಾರೆ. ರಾಜಧಾನಿ ಢಾಕಾದ ಆಸ್ಪತ್ರೆಗಳಂತೂ ಜ್ವರಪೀಡಿತರ ವಸತಿ ತಾಣಗಳ ಸ್ವರೂಪ ಪಡೆದುಕೊಂಡಿವೆ.

ಬಾಂಗ್ಲೀಯರನ್ನು ಬಾಧಿಸುತ್ತಿರುವ ಅನಾರೋಗ್ಯ ಅಲ್ಲಿನ ಸಾಮಾಜಿಕ ವ್ಯವಸ್ಥೆಯನ್ನೂ ಸೂಚಿಸುವಂತಿದೆ. ಚಿತ್ರದಲ್ಲಿನ ಆಸ್ಪತ್ರೆಯನ್ನೇ ನೋಡಿ. ರೋಗಿಗಳು, ಅವರನ್ನು ಕಾಳಜಿ ಮಾಡುವವರೆಲ್ಲ ಒಂದೆಡೆ ಸೇರಿದ್ದಾರೆ. ರೋಗಿಗಳಿಗೆ ಅಗತ್ಯವಾದ ಪ್ರಶಾಂತ–ಹಿತಕರ ವಾತಾವರಣ ಅಲ್ಲಿದ್ದಂತಿಲ್ಲ. ಆ ಪರಿಸರ ಜ್ವರವನ್ನು ಶಮನಗೊಳಿಸುತ್ತದೋ ಸಾಂಕ್ರಾಮಿಕಗೊಳಿಸುವುದೋ ಹೇಳುವುದು ಕಷ್ಟ. ಜನಸಾಮಾನ್ಯರು ಹಾಗೂ ಬಡವರಿಗೆ ಆರೋಗ್ಯ ಸವಲತ್ತುಗಳು ಯಾವಾಗಲೂ ತುಟ್ಟಿಯೇ.

■ ರಚನಾ

ಓಂ ✝ ☪ ಸರ್ವೇಜನಃ ಸುಖಿನೋ ಭವಂತುಃ ಓಂ ✝ ☪
ಸಮಸ್ಯೆ ನಿಮ್ಮದು ಪರಿಹಾರ ನಮ್ಮದು
ಶ್ರೀ ಸಾಯಿಬಾಬ ಉಪಾಸಕರು
ದಕ್ಷಿಣ ಭಾರತದಾದ್ಯಂತ ಜನಮನ್ನಣೆ ಪಡೆದಿರುವ ವಂಶಪಾರಂಪರಿಕ
ವಶೀಕರಣ ಮಾಂತ್ರಿಕರು
ಶ್ರೀಯುತ ಪರಶುರಾಮ್ ಗುರೂಜಿ
ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ವ್ಯಾಪಾರಾಭಿವೃದ್ಧಿ, ಜಮೀನು ವಿಚಾರ, ಕೋರ್ಟ್‌ಕೇಸ್, ಮಾಟಮಂತ್ರ, ಪ್ರೇತಬಾಧೆ ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ
ಕೇರಳ ಮತ್ತು ಕೊಳ್ಳೇಗಾಲದ 16ನೇ ಶತಮಾನದ ಪ್ರಾಚೀನ ತಾಳೆಗ್ರಂಥದ ರಹಸ್ಯವಾದ ಮಹಾರುದ್ರಶೂಲ ಪ್ರಣವಶಕ್ತಿಯಿಂದ
ಕೇವಲ 5 ದಿನದಲ್ಲಿ 100% ಪರಿಹಾರ ಶತಸಿದ್ಧ
ನೀವು ಎಷ್ಟೋ ದೈವ, ದೇವಸ್ಥಾನ ಮತ್ತು ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದೆ ನೊಂದಿದ್ದರೆ ಶೀಘ್ರ ಪರಿಹಾರಕ್ಕಾಗಿ ಇವರನ್ನೊಮ್ಮೆ ಭೇಟಿಮಾಡಿ.
ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:
9620444460
ಖಾಯಂ ಮನೆ ವಿಳಾಸ: ಜೈಬಾಲಾಜಿ ಜ್ಯೋತಿಷ್ಯಂ
ಬನಶಂಕರಿ ದೇವಸ್ಥಾನದ ಹತ್ತಿರ, ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ, ಬನಶಂಕರಿ ಬೆಂಗಳೂರು.
ವಿಶೇಷ ಸೂಚನೆ: ಈ ಪೇಪರ್ ಕಟ್ಟಿಂಗ್ ತಂದವರಿಗೆ ಮುಜರಾಯಿ ಇಲಾಖೆ ಮತ್ತು ಧಾರ್ಮಿಕ ದತ್ತಿ ಇಲಾಖೆ ಹಾಗೂ ಮಾಡಾಯಿಕಾವ್ ಭಗವತಿ ದೇವಸ್ಥಾನಂ (ತಳಿಪರಂ) ಕೇರಳ ವತಿಯಿಂದ ಉಚಿತ ಸೇವೆಗಳು ಮತ್ತು ಪರಿಹಾರಗಳು ಲಭ್ಯವಿದೆ.